


ಬದುಕುವ ಭರವಸೆಗಳೇ ಇಲ್ಲದಿರುವ ಹಾಗೂ ಸಹಿಸಲಸಾಧ್ಯ ನೋವು ಅನುಭವಿಸುವ ಸಂದರ್ಭಗಳಲ್ಲಿ ಬದುಕುವುದಕ್ಕಿಂತಲೂ ಸಾಯುವುದೇ ಒಳ್ಳೆಯದೆಂದು ರೋಗಿಗೆ ಅನ್ನಿಸಬಹುದು. ಸುಪ್ರೀಂ ಕೋರ್ಟ್‌ನ ತೀರ್ಪನ್ನು ಜಾರಿಗೊಳಿಸುವ ಪ್ರಯತ್ನವಾಗಿ, ಗುಣವಾಗದ ಹಾಗೂ ತೀವ್ರ ಯಾತನೆಯ ಕಾಯಿಲೆಗಳಿಗೆ ಒಳಗಾದ ರೋಗಿಗಳಿಗೆ ಘನತೆಯ ಸಾವು ಒದಗಿಸಿಕೊಡುವ ಆದೇಶವನ್ನು ರಾಜ್ಯದಲ್ಲಿ ಆರೋಗ್ಯ ಇಲಾಖೆ ಹೊರಡಿಸಿದೆ. ರೋಗಿಯ ಹಕ್ಕುಗಳನ್ನು ರಕ್ಷಿಸುವ ಹಾಗೂ ಘನತೆಯ ಸಾವಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈ ಕಾನೂನಿಗೆ ವಿಶೇಷ ಮಹತ್ವವಿದೆ. ದಯಾಮರಣದ ಮಹತ್ವ ಹಾಗೂ ಆ ಪರಿಕಲ್ಪನೆ ಹೋರಾಟದ ರೂಪದಲ್ಲಿ ಬೆಳೆದುಬಂದ ವಿಸ್ತೃತ ಅವಲೋಕನ ಈ ವಾರದ ‘ಸುಧಾ’ ವಿಶೇಷ.

■ ಮಂಜುಶ್ರೀ ಎಂ. ಕಡಕೋಳ